ಗೋಪಾಲನ್, ತಟ್ಟನೆ ನಿಲ್ಲಿಸಿ, 'ಈಗ ಮಾತು ಸಾಕು... ಮುಂದಿನ ಅರ್ಥವನ್ನು ನೀವು ತೆಯ್ಯಮ್ ಆಟದಲ್ಲೇ ಸಾಕ್ಷಾತ್ ನೋಡಬಹುದು...' ಎನ್ನುತ್ತ ಕಾರನ್ನು ಮುಂದಕ್ಕೆ ನಡೆಸಿದರು; ಸಮೀಪದ ಹೋಟೆಲಿಗೆ ಕರೆದೊಯ್ದು ನಮಗೆ ಹೊಟ್ಟೆತುಂಬ ಅಪ್ಪಮ್ ಊಟ ಮಾಡಿಸಿದರು.

★★★

ಎಲ್ಲ ಮುಗಿದು ತೆಯ್ಯಮ್ ನಡೆಯುವ ಆ ಊರಿಗೆ ತಲುಪುವಾಗ ರಾತ್ರಿಯಾಗಿತ್ತು. ಕರಾವಳಿಯ ಹಲವು ಊರುಗಳ ಹಾಗೆ, ಅದು ಅತ್ತ ಪೇಟೆಯನ್ನಲಿಕ್ಕೂ ಆಗದ ಇತ್ತ ಹಳ್ಳಿಯೆನ್ನಲಿಕ್ಕೂ ಬಾರದ ಒಂದು ಊರು. ಅದರ ಹೆಸರು ನನಗೀಗ ಮರೆತಿದೆ. ಹೆದ್ದಾರಿಯಿಂದ ತುಸು ಒಳಕ್ಕೆ ಹೋದರೆ ಒಂದು ಬದಿಗೆ ಭತ್ತದ ಗದ್ದೆ, ಇನ್ನೊಂದು ಬದಿ ಬಸ್ ನಿಲ್ದಾಣ; ಅದರ ಪಕ್ಕದಲ್ಲಿ ಒಂದು ಪ್ರಾಥಮಿಕ ಶಾಲೆ; ಪಕ್ಕದಲ್ಲಿ ವಿಶಾಲವಾದ ಒಂದು ಬಯಲು. ಆ ಬಯಲಿನ ಆಚೆಯ ತುದಿಯಲ್ಲಿ ಹೆಂಚಿನ ಮಾಡಿನ ಒಂದು ಪುಟ್ಟ ಗುಡಿ; ಅದರ ಪಕ್ಕದಲ್ಲಿ ಒಂದು ದೊಡ್ಡ ಮರವಿರುವ ದಿಬ್ಬ. ಮರಳು ಮಣ್ಣಿನ ಒಂದು ವೃತ್ತಾಕಾರದ ವೇದಿಕೆಯೇ ಅಂದು ನಾವು ನೋಡಿದ್ದ ತೆಯ್ಯಮ್ ಆಚರಣೆಯ ಕೇಂದ್ರಬಿಂದುವೆನ್ನುವಂತಿತ್ತು. ನಾವು ಹೋಗುವಷ್ಟರಲ್ಲಿ ಆ ಬಯಲಿನ ತುಂಬ ಜನಜಂಗುಳಿ ಸೇರಿತ್ತು; ಹತ್ತಾರು ಚಾದಂಗಡಿಗಳೂ ಅಡ್ಡಾದಿಡ್ಡಿ ನಿಲ್ಲಿಸಿದ ವಾಹನಗಳೂ ಬಯಲಿನ ತುಂಬ ಹರಡಿಕೊಂಡಿದ್ದವು. ತೆಯ್ಯಮ್ ಆರಂಭವಾಗಿದೆಯೆನ್ನುವುದಕ್ಕೆ ಸಾಕ್ಷಿಯಾಗಿ ಹಲವು ತಾಳವಾದ್ಯಗಳ ನಡುವೆ ನಾಗಸ್ವರದಂಥ ಊದುವಾದ್ಯ ಮೊಳಗುತ್ತಿತ್ತು.

ಗೋಪಾಲನ್, ಆ ಆವರಣದ ಹೊರಭಾಗದಲ್ಲಿ ನಮ್ಮನ್ನೆಲ್ಲ ಸುತ್ತ ನಿಲ್ಲಿಸಿಕೊಂಡು, ಗಲಾಟೆ ಮೀರಿಸುವ ಗಟ್ಟಿದನಿಯಲ್ಲಿ ಮತ್ತೊಂದಿಷ್ಟು ವಿವರಣೆ ಕೊಟ್ಟರು – 'ಈ ಊರು ತೆಯ್ಯಮ್ ನಡೆಯುವ ಒಂದು ಪ್ರಮುಖ ಸ್ಥಳ. ನೀವು ವರ್ಷದ ಸೀಸನ್ನಿನ ತುದಿಗೆ ಬಂದಿದ್ದೀರಿ; ತುಲಾಮಾಸ ಆರಂಭವಾಗುವಾಗ ಇಲ್ಲಿ ನಡೆಯುವ ತೆಯ್ಯಮ್‌ಗೆ ಕನಿಷ್ಠ ಐದು ಸಾವಿರ ಜನ ಸೇರುತ್ತಾರೆ. ನೀವು ಈಗ ಬಂದಿದ್ದು ಅನುಕೂಲವೇ ಆಯಿತು; ತುಸು ಆರಾಮಾಗಿ ಓಡಾಡಬಹುದು...' ಅನ್ನುತ್ತ ಆ ಕೇಂದ್ರಸ್ಥಳದತ್ತ ಬೊಟ್ಟು ಮಾಡುತ್ತ ಹೇಳಿದರು – 'ಅದು ಈ ಊರಿನ ಪ್ರಮುಖ ದೆಯ್ಯದ ಸ್ಥಾನ. ಆದ್ದರಿಂದ, ಆ ದಿಬ್ಬದ ಮೇಲೆ ಕಾಣಿಸಿಕೊಳ್ಳುವುದು ಪ್ರಧಾನ ದೆಯ್ಯ. ಆದರೆ, ಈ ಊರಿನ ವಿಶೇಷವೆಂದರೆ, ಇಲ್ಲಿ ಬೇರೆಬೇರೆ ದರ್ಜೆಯ ಹತ್ತಾರು ತೆಯ್ಯಮ್‌ಗಳು ಒಟ್ಟಿಗೇ ಕಾಣಿಸಿಕೊಳ್ಳುತ್ತವೆ. ಮತ್ತೆ ಹೆದರಬೇಡಿ, ಕೆಲವು "ಪುಡಿ–ದೆಯ್ಯ"ಗಳು ಬಯಲಿನ ಎಲ್ಲ ಕಡೆ ಓಡಾಡುತ್ತ ಸಾಕ್ಷಾತ್ ನಿಮ್ಮ ಬಳಿಗೇ ಬರಬಹುದು...' ಎಂದವರೇ, ತಮ್ಮ ವಾಚು ನೋಡುತ್ತ ಸೇರಿಸಿದರು – 'ಓಕೆ... ಈಗ ನೀವು ದೇವರು–ದೆಯ್ಯಗಳ ಒಂದು ವಿಶಾಲವಾದ ಡಿಪಾರ್ಟ್‌ಮೆಂಟಲ್ ಸ್ಟೋರಿಗೆ ಬಂದಿದ್ದೀರಿ ಅಂದುಕೊಳ್ಳಿ. ನಿಮ್ಮ ಅಗತ್ಯ, ಅನುಕೂಲ ಮತ್ತು ಅಭಿರುಚಿಗೆ ತಕ್ಕುದಾದ ದೆಯ್ಯವನ್ನು ಆರಿಸಿಕೊಂಡು ನೀವದನ್ನು ಫಾಲೋ ಮಾಡಬಹುದು; ಅಥವಾ ಸ್ಯಾಂಪಲ್ಲಿಗೆ ಬೇರೆಬೇರೆ ದೆಯ್ಯಗಳನ್ನು ಅಷ್ಟಿಷ್ಟು ನೋಡುತ್ತ ಓಡಾಡಬಹುದು... ನವ್, ದೇರ್ ಆರ್ ಸ್ಪಿರಿಟ್ಸ್ ಎಂಡ್ ಯೂ ಪೀಪಳ್! ನಡುವೆ ನಾನು ಯಾತಕ್ಕೆ ಅಲ್ಲವಾ? ನಾನು ಒಂದು ಗಂಟೆ ಅತ್ತಿತ್ತ ಸುತ್ತಾಡಿ ಆಮೇಲೆ ಕಾರಿನಲ್ಲಿ ಕೂತು ರೆಸ್ಟ್ ಮಾಡುತ್ತೇನೆ. ಬೆಳಗಿನ ಜಾವ ಎರಡು ಗಂಟೆಗೆ ಕಾರಿನ ಹತ್ತಿರ ಬನ್ನಿ... ಮತ್ತೆ ನಾಳೆ ಬೆಳಿಗ್ಗೆಯೇ ನಿಮಗೆ ಮಂಗಳೂರಿಗೆ ಹೊರಡಬೇಕಲ್ಲ?' ಎನ್ನುತ್ತ ದಾಪುಗಾಲಿನಲ್ಲಿ ಕಾಣೆಯಾದರು. ನಾವೂ ಗುಂಪಿನೊಳಗೆ ಸೇರಿಕೊಳ್ಳಲು ಹೊರಟೆವು.

ಜನಗಳ ನಡುವೆ ತಳ್ಳಾಡಿಸಿಕೊಳ್ಳುತ್ತ, ಆ ಪ್ರಧಾನ ಸ್ಥಾನದ ಬಳಿ ಹೋದಾಗ, ಆ ವೃತ್ತದ ಒಳಗೆ ತಲೆಗೇನೂ ಮುಂಡಾಸು ಸುತ್ತದ, ಅರೆವೇಷದ ಪಾತ್ರವೊಂದು ಸುತ್ತ ಸುತ್ತುತ್ತ, ಆಗಾಗ ಗಿರಕಿ ಹೊಡೆಯುತ್ತಿತ್ತು. ಚಂಡೆಗಳ ಅಬ್ಬರದ ನಡುವೆ ಒಮ್ಮೊಮ್ಮೆ ಏಕತಾನ ಧ್ವನಿಯ ನಾಗಸ್ವರದಂಥ